ಕೆ.ವಿ. ಲೈನ್ ಇಲ್ಲದೆ. ದಯವಿಟ್ಟು ಮಾನ್ಯ ಸ್ನೇಹಿತರು ಸಮಸ್ಯೆ ಅರ್ಥ ಮಾಡಿಕೊಳ್ಳಬೇಕು. ಇದು ರಾಜ್ಯದ ಭವಿಷ್ಯ. ಕೈಗಾ ಪ್ಲಾಂಟ್ ಸೆಂಟ್ರಲ್‌ಪ್ಲಾಂಟ್.ನಮಗೆ 10 ಪರ್ಸೆಂಟ್ ಶೇರ್ ಆಡ್ ಆಗುತ್ತದೆ, ಟ್ರಾನ್ಸ್‌ಮಿಷನ್ ಲೈನ್ ಈಗ ಹಾಕಿಕೊಳದೇ ಇದ್ದರೆ ನಾವು ಐದು ವರ್ಷ ಕಷ್ಟ ಪಡಬೇಕಾಗುತ್ತದೆ.

ಡಾ॥ ಯು. ಚಿತ್ತರಂಜನ್ : ನಾವು ಎಕ್ಸ್‌ಪರ್ಟ್ಸ್ ಅಭಿಪ್ರಾಯವನ್ನು ಒಪ್ಪುವುದಕ್ಕೆ ತಯಾರಿದ್ದೇವೆ. ಇದು ಚರ್ಚೆಯಾಗಲಿ. ಚರ್ಚೆಗೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಚರ್ಚೆ ಮಾಡಲಿಕ್ಕೆ ಬೇಡ ಎಂದು ಅಲ್ಲ. ಆದರೆ ಈಗ ಸಮಯ ಅಲ್ಲ. ಮೂರು ವರ್ಷ ಆಗತಕ್ಕದ್ದಕ್ಕೆ ಇವತ್ತು ಏತಕ್ಕೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳುತ್ತಿದ್ದೀರಿ. ನಮ್ಮ ತುಂಗಭದ್ರಾದ ಅನುಭವ ಇದೆ. ಡ್ಯಾಮ್ ಕಟ್ಟಿದ ಮೇಲೆ ಕೆನಾಲ್ ತೋಡುವುದು ಅಲ್ಲ. ಡ್ಯಾಮ್ ಕಟ್ಟುವಾಗಲೇ ಕೆನಾಲ್ ಮಾಡುವುದರಿಂದ ಅದರ ಉಪಯುಕ್ತತೆ ಹೆಚ್ಚಾಗುತ್ತದೆಂಬುದು ಸರ್ಕಾರದ ಭಾವನೆ.

ಡಾ॥ ಯು. ಚಿತ್ತರಂಜನ್ : ಕೆನಾಲ್ ಹೀಗೇ ಹೋಗಬೇಕು ಎಂದು ಏನೂ ಇಲ್ಲ. ಕೆನಾಲ್ ಬೇರೆ ಮಾರ್ಗವಾಗಿ ತೆಗೆದುಕೊಂಡು ಹೋಗುವುದಕ್ಕೆ ಬರುತ್ತದೆ. ಇಷ್ಟೆಲ್ಲಾ ಹೇಳಿದರೂ ಕೂಡ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆ ಎಂಬ ಕನಿಷ್ಠ ಆಶ್ವಾಸನೆ ಕೂಡ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು : ಬಸನಗೌಡರೇ, ತಾವು ಕೇಳಿ.

(2) **ಬಿಜಾಪುರ ನಗರದಲ್ಲಿ ರಸ್ತೆಗಳು ಹಾಗೂ ಒಳಚರಂಡಿ ವ್ಯವಸ್ಥೆ ದುರಸ್ತಿ.**

ಶ್ರೀ ಬಸನಗೌಡ ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ನಗರದಲ್ಲಿ ಹದಗೆಟ್ಟಿರುವ ರಸ್ತೆಗಳು ಹಾಗೂ ಒಳಚರಂಡಿ ಅವ್ಯವಸ್ಥೆಯಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ. ಬಿಜಾಪುರ ನಗರ ಸಭೆಯು ಕೆಲವೊಂದು ಪ್ರದೇಶಗಳಲ್ಲಿ ಮುಖ್ಯ ರಸ್ತೆಗಳ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಮಾಡಿಸುತ್ತಿದೆ. ಹಣಕಾಸಿನ ಅಭಾವದಿಂದ ನಗರದ ಎಲ್ಲಾ ಪ್ರದೇಶಗಳ ರಸ್ತೆ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿರುವುದಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಬಿಜಾಪುರ ನಗರಸಭೆಯ ನಗರದ ಎಲ್ಲಾ ಪ್ರದೇಶಗಳಿಗೆ ರಸ್ತೆಗಳ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

ಶ್ರೀ ಬಸನಗೌಡ ಪಾಟೀಲ್ : ಉಪಾಧ್ಯಕ್ಷರೆ, ಬಿಜಾಪುರದ ಅನೇಕ ರಸ್ತೆಗಳು ಹಳ್ಳಿಯ ಪ್ರದೇಶಗಳಿಗಿಂತ ಕನಿಷ್ಠ ರಸ್ತೆಗಳಾಗಿ ಇವತ್ತು ಮಾರ್ಪಾಡಾಗಿವೆ. ಬಿಜಾಪುರದ ಜನತೆ ಈ ರಸ್ತೆಗಳಲ್ಲಿ ಸಾರ್ವಜನಿಕವಾಗಿ ವಾಹನಗಳನ್ನು ಓಡಾಡಿಸುವ ಪರಿಸ್ಥಿತಿಯಲ್ಲಿಲ್ಲ. ಅದೇ ರೀತಿ ಇನ್ನೊಂದು ಪ್ರಮುಖವಾದಂಥ ಒಂದು ಒಳಚರಂಡಿ ಯೋಜನೆಯನ್ನು 1972ರಲ್ಲಿ ನಗರಸಭೆಗೆ ವಹಿಸಿಕೊಟ್ಟರು. ಸನ್ಮಾನ್ಯ ಸಚಿವರು ಮೊನ್ನೆ ಕೊಟ್ಟಂಥ ಉತ್ತರದಲ್ಲಿ ನಗರಸಭೆಗೆ ವಹಿಸಿಕೊಡಲಾಗಿದ್ದನ್ನು ಹೇಳಿದ್ದಾರೆ. 1972ರ ನಂತರ ಬಿಜಾಪುರ ನಗರ ವಿಪರೀತವಾಗಿ ಬೆಳೆದಿದೆ. ಇವತ್ತು ಅನೇಕ ಹೊರಗಿನ ಪ್ರದೇಶಗಳಲ್ಲಿ ಬೆಳೆದಂಥ ಬಿಜಾಪುರ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲದೆ ಅಲ್ಲಿ ಸಾರ್ವಜನಿಕರು ತೀವ್ರವಾದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅನೇಕ ಜನರು ಸೆಪ್ಟಿಕ್ ಟ್ಯಾಂಕ್‌ಗಳನ್ನು ಕಟ್ಟಿಕೊಂಡಿದ್ದರೂ ಆ ಸೆಪ್ಟಿಕ್ ಟ್ಯಾಂಕ್‌ಗಳಿಂದ ಮಲವನ್ನು ಹೊರಹಾಕುವ ಯಂತ್ರಗಳೂ ಸಹ ನಮ್ಮ ವಿಜಾಪುರ ನಗರಸಭೆಯಲ್ಲಿಲ್ಲ. ಹಣಕಾಸಿನ

ಅಭಾವವಿರುವ ಹಿನ್ನೆಲೆಯಲ್ಲಿ ನಾವು ಯಾವುದೇ ಒಂದು ಕೆಲಸ ಮಾಡಲಿಲ್ಲ ಎನ್ನುವಂಥ ಹೇಳಿಕೆ ಸನ್ಮಾನ್ಯ ಸಚಿವರುದು ಇದೆ. ಇದನ್ನು ಯಾವಾಗ ಮಾಡುತ್ತೀರಿ? ಇದಕ್ಕೆ ನಿಶ್ಚಿತವಾದಂಥ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಅಂದಾಜನ್ನು ಹಾಕಿಕೊಂಡು ಸರ್ಕಾರ ಬಹಳ ಗಂಭೀರವಾದಂಥ ಈ ಎರಡು ಪ್ರಮುಖವಾದಂಥ ಕೆಲಸಗಳನ್ನು ಅಂದರೆ ರಸ್ತೆ ಮತ್ತು ಒಳಚರಂಡಿ ಬಗ್ಗೆ ಮಹತ್ತರವಾಗಿ ಪ್ರಾಧಾನ್ಯತೆ ಕೊಡಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ 1994-95ರಲ್ಲಿ ರೋಡುಗಳ ರಿಪೇರಿ ಸಲುವಾಗಿ 127 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈ ವರ್ಷವೂ ಕೂಡ 1995-96ರಲ್ಲಿ 100 ಲಕ್ಷ ರೂಪಾಯಿ ಯೋಜನೆ ಹಾಕಿಕೊಳ್ಳಲಾಗಿದೆ. ಅದರ ಸಲುವಾಗಿ ಕಾಯ್ದಿರಿಸಲಾಗಿದೆ. ಕೆರವು ಕಡೆ ಟ್ಯಾಕ್ಸ್ ವಸೂಲಿಯಾಗಿಲ್ಲ. ಅದರ ಹಣ ಬರದೆ ಹಣದ ಅಭಾವ ಇದೆ. ಈ ಟ್ಯಾಕ್ಸನ್ನು ರ್ಯಾಷನಲೈಸ್ ಕೂಡ ಸರ್ಕಾರ ಮಾಡುತ್ತಿದೆ. ಪರಿಸ್ಥಿತಿ ಸುಧಾರಿಸಿದ ನಂತರ ಮತ್ತು ಈ ವರ್ಷದ 100 ಲಕ್ಷ ರೂಪಾಯಿ ಏನಿದೆ ಅದರಲ್ಲಿ ಹೆಚ್ಚಾಗಿ ರೋಡಿನ ರಿಪೇರಿ ಮಾಡುವುದಕ್ಕೆ ನಾನು ಆದೇಶಿಸುತ್ತೇನೆ.

ಶ್ರೀ ಬಸನಗೌಡ ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಏನಾಗಿದೆಯೆಂದರೆ ಬಿಜಾಪುರ ನಗರಸಭೆಯವರು ಏನು ಕರ ಪರಿಷ್ಕರಣೆ ಮಾಡಿದ್ದಾರೆ ಬಹಳ ಅಸಮರ್ಪಕವಾಗಿ ಮತ್ತು ಅವೈಜ್ಞಾನಿಕವಾಗಿ ಮಾಡಿದ್ದರ ಪರಿಣಾಮವಾಗಿ ಇವತ್ತು ಬಿಜಾಪುರದ ಸಾರ್ವಜನಿಕರು ಕೋರ್ಟಿಗೆ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಅಂದರೆ ಸಾಮಾನ್ಯ ಬಡವರ ಮನೆಗೆ ಸಾವಿರಾರು ರೂಪಾಯಿಯನ್ನು ನಗರಸಭೆಯವರು ಕರ ಹಾಕಿದರು. ಅನೇಕ ಶ್ರೀಮಂತರ ಮನೆಗಳಿಗೆ ಸರಿಯಾಗಿ ಕರ ಹಾಕದೆ ಅದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದು ಕರದ ಪರಿಷ್ಕರಣೆ ಸರಿಯಾಗಿ ಆಗಲಿಲ್ಲ. ಆ ಹಿನ್ನೆಲೆಯಲ್ಲಿ ಬಿಜಾಪುರದ ಜನತೆ ಅದನ್ನು ಕೊಡಲಿಕ್ಕೆ ನಿರಾಕರಿಸಿದ್ದಾರೆ. ಇದರ ಹಿನ್ನೆಲೆಯಲ್ಲಿ ಇಡೀ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ದಯಮಾಡಿ ಸನ್ಮಾನ್ಯ ಸಚಿವರು ಇನ್ನೊಮ್ಮೆ ಕರ ಪರಿಷ್ಕರಣೆಯನ್ನು ವೈಜ್ಞಾನಿಕವಾಗಿ ಮಾಡಿ, ಪ್ರಾಮಾಣಿಕ ಅಧಿಕಾರಿಗಳಿಂದ ಯಾವ ಯಾರ ಹಂತದಲ್ಲಿ ಯಾವ ಯಾವ ರೀತಿ ಹಾಕಬೇಕು ನೋಡಿ ಬಿಜಾಪುರದ ಜನರಿಗೆ ಕರವನ್ನು ನಿರ್ಧರಿಸಬೇಕು ಎಂದು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ಹಾಗೆ ಮಾಡಿದರೆ ನಿಶ್ಚಿತವಾಗಿ ಬಿಜಾಪುರದ ಜನ ಕರ ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಏನಾಗಿದೆ ಅಂದರೆ ಉಪಾಧ್ಯಕ್ಷರೆ, ಅರಮನೆ ತರಹ ಇದ್ದವರಿಗೆ ಕೇವಲ ಒಂದು ಸಾವಿರ ರೂಪಾಯಿ ಮುನಿಸಿಪಲ್ ಕರ ಹಾಕಿದ್ದಾರೆ, ಒಬ್ಬ ಸಾಮಾನ್ಯ ಬಡವನ ಮನಗೆ 1500 ರೂಪಾಯಿ ಕರ ಹಾಕಿದ್ದಾರೆ. ಈ ಅಸಮರ್ಪಕತೆಯನ್ನು ತೊಡೆದು ಹಾಕಲಿಕ್ಕೆ ಇನ್ನೊಮ್ಮೆ ಪರಿಷ್ಕರಣೆ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ.

11.30 ಎ.ಎಂ.

ಶ್ರೀ ಬಸನಗೌಡ ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ ಯುಜಿಡಿಗೆ ಸಂಬಂಧಿಸಿದಂತೆ ಬಿಜಾಪುರ ನಗರಸಭೆಯಿಂದ ಒಂದು ಪ್ರಸ್ತಾವನೆ ಬಂದಿದೆ. ಪ್ರಸ್ತಾವನೆ ಏನೆಂದರೆ ನಗರದ 2ನೇ ಹಂತದ ಕುಡಿಯುವ ನೀರಿನ ಯೋಜನೆ ಪೂರ್ತಿ ಆದಮೇಲೆ 6.6 ಎಂಜಿಡಿಯಷ್ಟು ನೀರು ಬರುತ್ತದೆ. ಈ ಯೋಜನೆಯನ್ನು ಈ ನೀರನ್ನು ಹೊರಗೆ ಹಾಕತಕ್ಕಂಥ ಯೋಜನೆಯನ್ನು ಹಿಂದೆ ರೂಪಿಸಿರಲಿಲ್ಲ. ಈಗ ಬಿಜಾಪುರ ನಗರಸಭೆಯವರು ಆ ಯೋಜನೆಯನ್ನು ರೂಪಿಸಿಕೊಟ್ಟಿದ್ದಾರೆ. ಈ ಯೋಜನೆಗೆ ಸರ್ಕಾರ ಮಂಜೂರಾತಿ ಕೊಟ್ಟರೆ 2ನೇ ಹಂತದ ಒಳಚರಂಡಿ ಯೋಜನೆ

ಕಾರ್ಯಗತವಾಗುತ್ತದೆ. ಆದ್ದರಿಂದ ಇದಕ್ಕೆ ಮಂಜೂರಾತಿ ಕೊಡುವುದಕ್ಕೆ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಯೋಜನೆಗೆ ಹಾಗೂ ಒಳಚರಂಡಿ ಯೋಜನೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಬಹಳಷ್ಟು ನಗರಪಾಲಿಕೆಗಳಿಂದ ಸರ್ಕಾರಕ್ಕೆ ಬಂದಿದೆ. ಆ ಪ್ರಸ್ತಾವನೆಗಳನ್ನು ಮಂಡಳಿಯ ಮುಂದಿಟ್ಟು ಅಲ್ಲಿಂದ ಅಂಗೀಕಾರವಾಗಿ ಸರ್ಕಾರಕ್ಕೆ ಬಂದ ನಂತರ ನಾವು ಅದಕ್ಕೆ ಮಂಜೂರಾತಿ ಕೊಡುತ್ತೇವೆ.

ನಿಯಮ 351ರ ಮೇರೆಗೆ

(1) ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಗೆ ಪ್ರೋತ್ಸಾಹ ನೀಡುವ ಸಲುವಾಗಿ ಕನಿಷ್ಠ 5 ಲಕ್ಷ ರೂಪಾಯಿಗಳ ಬಿಡುಗಡೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಸೆಪ್ಟಂಬರ್ 14ರಿಂದ ಮಂಗಳೂರಿನಲ್ಲಿ ನಡೆಯಲಿರುವ ಏಳನೇ ಪುರುಷ ಮತ್ತು ಆರನೇ ಮಹಿಳೆಯರ ವಿಷ್ಣು ಪವರ್ ಲಿಫ್ಟಿಂಗ್ ಒಕ್ಕೂಟದ ಆಶ್ರಯದಲ್ಲಿ ಕರ್ನಾಟಕ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ದೇಶದ ಮತ್ತು ವಿದೇಶದ ಸುಮಾರು 150 ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ವಿಷ್ಣು ಪವರ್‌ಲಿಫ್ಟಿಂಗ್ ಒಕ್ಕೂಟ ಮತ್ತು ಭಾರತೀಯ ಪವರ್ ಲಿಫ್ಟಿಂಗ್ ಸಂಸ್ಥೆಯು ಈ ಚಾಂಪಿಯನ್ ಶಿಪ್‌ನ್ನು ಸಂಘಟಿಸುತ್ತದೆ. ಹಾಲಿ ವಿಷ್ಣು ಚಾಂಪಿಯನ್ ಕಜಕಿಸ್ಥಾನ ಸಹಿತ ಚೈನೀಸ್, ಥೈಪೆ, ಜಪಾನ್, ಕೊರಿಯಾ, ಪಾಕಿಸ್ಥಾನ, ಶ್ರೀಲಂಕಾ, ಇಂಡೋನೇಷಿಯಾ, ಫಿಲಿಪ್ಪೈನ್ಸ್ ಮತ್ತು ಭಾರತ ಈ ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಸುಮಾರು 6 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿಷ್ಣು ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯಲಿರುವುದು ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತರುವ ಈ ವಿಷ್ಣು ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಪ್ರೋತ್ಸಾಹ ಕೊಡಲು ಸರ್ಕಾರ ಕನಿಷ್ಠ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ಇನ್ನೂ ನನ್ನ ಗಮನಕ್ಕೆ ಬಂದಿಲ್ಲ. ಬಂದ ನಂತರ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಈ ಪ್ರಶ್ನೆಯನ್ನು ಅವರ ಇಲಾಖೆಗೆ ಕಳುಹಿಸಿ ಒಂದು ವಾರ ಆಗಿದೆ.

(2) ಕಾಪು ಮತ ಕ್ಷೇತ್ರದ ಮಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲ್ಲಿ ವಿಶ್ವ ಬ್ಯಾಂಕ್ ಯೋಜನೆ ಅನ್ವಯ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಉಪಾಧ್ಯಕ್ಷರೆ, ಕಾಪು ಮತ ಕ್ಷೇತ್ರದ ಮೂಳೂರು ಗ್ರಾಮ ಮತ್ತು ಶಿರ್ವ ಗ್ರಾಮಗಳಲಿ ವಿಶ್ವ ಬ್ಯಾಂಕ್ ಯೋಜನೆಯನ್ವಯ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಿ ಸಂಪೂರ್ಣಗೊಳಿಸಿರುವುದಿಲ್ಲ. ಸಾರ್ವಜನಿಕರಿಗೆ ಕುಡಿಯುವ ನೀರಿನ ತೀವ್ರ ತೊಂದರೆ ಇರುವುದರಿಂದ ಯೋಜನಾ ಕಾಮಗಾರಿಗಳನ್ನು ತ್ವರಿತವಾಗಿ ಸಂಪೂರ್ಣಗೊಳಿಸಿ ಜೀವನಾವಶ್ಯಕವಾಗಿರುವ ಕುಡಿಯುವ ನೀರನ್ನು ಒದಗಿಸುವಲ್ಲಿ ತುರ್ತು ಕ್ರಮವನ್ನು